ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ
ರಾಷ್ಟ್ರೀಯ ಸೇವಾ ಯೋಜನೆ

ಸಂ: ಡಿಟಿಇ/ಎನ್‌ಎಸ್‌ಎಸ್/13/ಕಾ–ಕಾರ್ಯಗಾರ/2017–18

ಆಯುಕ್ತರವರ ಕಛೇರಿ,
ಅರಮನೆ ರಸ್ತೆ ಬೆಂಗಳೂರು–01,
ದಿನಾಂಕ: 09.01.2025

## ಸುತ್ತೋಲೆ

**ವಿಷಯ:** : ಎನ್.ಎಸ್.ಎಸ್ ಕಾರ್ಯಕ್ರಮಾಧಿಕಾರಿಗಳ ರಾಜ್ಯ ಮಟ್ಟದ ಒಂದು ದಿನದ ಕಾರ್ಯಗಾರದ ಬಗ್ಗೆ.

**ಉಲ್ಲೇಖ** : 1) ಎನ್‌ಎಸ್‌ಎಸ್ ಮ್ಯಾನುಯಲ್‌ನ ನಿಯಮ ನಿಯಮ 3.35

2) ಇಲಾಖೆಯ ಪತ್ರ ಸಂಖ್ಯೆ:ಡಿಟಿಇ/ಎನ್.ಎಸ್.ಎಸ್/14/ಇ–ಪ್ರಶಸ್ತಿ/2012–13 ದಿನಾಂಕ: 15.03.2024

* * * * *

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖ (1)ಕ್ಕೆ ಸಂಬಂಧಿಸಿದಂತೆ, ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ರಾಜ್ಯದ ಎಲ್ಲಾ ಪಾಲಿಟೆಕ್ನಿಕ್‌ಗಳ ಸಂಸ್ಥೆಗಳ ಎನ್‌ಎಸ್‌ಎಸ್ ಘಟಕಗಳ ಕಾರ್ಯಕ್ರಮಾಧಿಕಾರಿಗಳಿಗೆ ಒಂದು ದಿನದ ಪುನರ್ ಮನನ ಕಾರ್ಯಾಗಾರವನ್ನು **ದಿನಾಂಕ: 31.01.2025 ರಂದು ಬೆಂಗಳೂರಿನ ಕುಮಾರ ಪಾರ್ಕ್ ಪೂರ್ವದಲ್ಲಿರುವ ಗಾಂಧಿ ಭವನದಲ್ಲಿ** ಏರ್ಪಡಿಸಲಾಗಿದೆ. ಈ ಕಾರ್ಯಗಾರದಲ್ಲಿ ರಾ.ಸೇ.ಯೋ ಘಟಕಗಳ ಇಲಾಖಾ ಮಟ್ಟದ ಕಾರ್ಯಕ್ರಮಗಳ ಅನುಷ್ಠಾನ, ತಾಂತ್ರಿಕ ಸೇವೆಗಳನ್ನು ರಾಷ್ಟ್ರೀಯ ಸೇವಾ ಯೋಜನೆಯ ಚಟುವಟಿಕಗಳಲ್ಲಿ ಅಳವಡಿಸುವಿಕೆ ಹಾಗೂ ಲೆಕ್ಕ ಪತ್ರಗಳ ನಿರ್ವಹಣೆಯ ಬಗ್ಗೆ ಮಾಹಿತಿ ನೀಡಲಾಗುವುದು. ಕಾಲೇಜು ಹಂತದಲ್ಲಿ ಇದರ ಪರಿಣಾಮಕಾರಿ ಅನುಷ್ಠಾನಕ್ಕಾಗಿ ರಾ.ಸೇ.ಯೋ ಕಾರ್ಯಕ್ರಮಾಧಿಕಾರಿಗಳು ತಪ್ಪದೇ ಹಾಜರಾಗಿ ನೊಂದಣಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ, ದೈನಂದಿನ ಚಟುವಟಿಕೆಯ & ವಿಶೇಷ ಶಿಬಿರದ ಲೆಕ್ಕ ಪತ್ರ, ವರದಿ, ಹಾಗೂ ನಿಯೋಜನಾ ಪತ್ರದೊಂದಿಗೆ ಶಿಸ್ತು ಬದ್ಧತೆಯಿಂದ ಸಮಯಕ್ಕೆ ಸರಿಯಾಗಿ ಹಾಜರಿರುವುದು.

ಉಲ್ಲೇಖ (2) ರಲ್ಲಿ ತಿಳಿಸಿರುವಂತೆ ರಾಷ್ಟ್ರಿಯ ಸೇವಾ ಯೊಜನೆಯಲ್ಲಿ ವಿಶೇಷ ಸಾಧನೆ ಮಾಡಿದ ಕಾರ್ಯಕ್ರಮಾಧಿಕಾರಿ ಮತ್ತು ಸ್ವಯಂ ಸೇವಕರುಗಳಿಗೆ ಈ ಕೆಳಗಿನ ಕೋಷ್ಟಕದಲ್ಲಿ ತಿಳಿಸಲಾದ ವರ್ಗಗಳಡಿಯಲ್ಲಿ ಇಲಾಖಾ ಹಂತದ ರಾಜ್ಯ ಪ್ರಶಸ್ತಿಗಳನ್ನು ನೀಡಲಾಗುವುದು.

| ಉತ್ತಮ ಕಾರ್ಯಕ್ರಮಾಧಿಕಾರಿ | ಉತ್ತಮ ಸ್ವಯಂ ಸೇವಕ | ಉತ್ತಮ ಸ್ವಯಂ ಸೇವಕಿ |
|---|---|---|
| ಶ್ರೀ ಸಂತೋಷ್ ಕುಮಾರ್ ಪಿ,<br>ಕರ್ನಾಟಕ (ಸರ್ಕಾರಿ) ಪಾಲಿಟೆಕ್ನಿಕ್,<br>ಮಂಗಳೂರು | 1) ಪ್ರಖ್ಯಾತ, ಎಸ್. ಎನ್.ಎಂ ಪಾಲಿಟೆಕ್ನಿಕ್, ಮೂಡಬಿದರೆ<br>2) ಪ್ರಜ್ವಲ್, ಸರ್ಕಾರಿ ಪಾಲಿಟೆಕ್ನಿಕ್, ಬಾಗೇಪಲ್ಲಿ<br>3) ಲಿಖಿತ್, ಕರ್ನಾಟಕ (ಸರ್ಕಾರಿ) ಪಾಲಿಟೆಕ್ನಿಕ್, ಮಂಗಳೂರು | 1) ಧನುಶ್ರೀ, ಎಸ್. ಎನ್.ಎಂ ಪಾಲಿಟೆಕ್ನಿಕ್, ಮೂಡಬಿದರೆ<br>2) ದೀಕ್ಷಾ, ಕರ್ನಾಟಕ ಸರ್ಕಾರಿ ಪಾಲಿಟೆಕ್ನಿಕ್, ಮಂಗಳೂರು<br>3) ಪ್ರೀತಿ, ಎಸ್. ಎನ್.ಎಂ ಪಾಲಿಟೆಕ್ನಿಕ್, ಮೂಡಬಿದರೆ |

ಈ ಕಾರ್ಯಗಾರವು ಇಲಾಖೆಯ ಆಯುಕ್ತರ ಮತ್ತು ನಿರ್ದೇಶಕರು ಉಪಸ್ಥಿತಿಯಲ್ಲಿ ಹಾಗೂ ರಾ.ಸೇ.ಯೋ ಪ್ರಾದೇಶಿಕ ನಿರ್ದೇಶಕರು (ಭಾರತ ಸರ್ಕಾರ), ರಾಜ್ಯ ಎನ್.ಎಸ್.ಎಸ್ ಅಧಿಕಾರಿಗಳು ಮತ್ತು ಇತರ ಗಣ್ಯರ ಸಮ್ಮುಖದಲ್ಲಿ ನಡೆಯಲಿದೆ. ಸದರಿ ಕಾರ್ಯಗಾರಕ್ಕೆ ತಮ್ಮ ಸಂಸ್ಥೆಯ ಕಾರ್ಯಕ್ರಮಾಧಿಕಾರಿಗಳನ್ನು ಕಡ್ಡಾಯವಾಗಿ ನಿಯೋಜಿಸಲು ಪ್ರಾಚಾರ್ಯರಿಗೆ ಸೂಚಿಸಲಾಗಿದೆ.

Manjula
ಆಯುಕ್ತರು

*ವಿಶೇಷ ಸೂಚನೆ : ಬೆಳಗ್ಗೆ 8:00 ಘಂಟೆಗೆ ಉಪಹಾರದೊಂದಿಗೆ ಪ್ರಾರಂಭವಾಗಿ ಸಂಜೆ 4:30 ಘಂಟೆಗೆ ಮುಕ್ತಾಯಗೊಳ್ಳಲಿದೆ*

**ಇವರಿಗೆ,** ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಸಂಸ್ಥೆಗಳ ಪ್ರಾಚಾರ್ಯರುಗಳಿಗೆ –ಸೂಕ್ತ ಕ್ರಮಕ್ಕಾಗಿ

**ಪ್ರತಿ:**

1. ರಾಜ್ಯ ಎನ್ ಎಸ್ ಎಸ್ ಅಧಿಕಾರಿಗಳು, ಎನ್‌ಎಸ್‌ಎಸ್ ಕೋಶ ಯುವಜನ ಸೇವಾ ಇಲಾಖೆ ಬೆಂಗಳೂರು.
2. ಪ್ರಾದೇಶಿಕ ನಿರ್ದೇಶಕರು, ಎನ್‌ಎಸ್‌ಎಸ್ ಪ್ರಾದೇಶಿಕ ಕೇಂದ್ರ, ಬಸವನಗುಡಿ ಬೆಂಗಳೂರು–04
3. ಇ–ಆಡಳಿತ ವಿಭಾಗಕ್ಕೆ ಇಲಾಖಾ ಅಂತರ್ಜಾಲತಾಣದಲ್ಲಿ ಪ್ರಕಟಿಸಲು
4. ಕಛೇರಿ ಕಡತಕ್ಕೆ